ಮಸೀದಿ, ಬರೀದಿಯಾ ಗುಲ್ಲಾರ, ಹಾವೇಲಿ ಮತ್ತು ಬೀದರ್‌ಗಳಲ್ಲಿ ನಮಾಜ್‌ಗೆ ಅವಕಾಶ ಮಾಡಿಕೊಡುವುದು.

79(349) ಶ್ರೀ ಸೈಯಾದ್ ಜುಲ್ಫಕರ್ ಹಷ್ಮಿ (ಬೀದರ್) : ಮಾನ್ಯ ವಕ್ಫ್ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1.ಮಸೀದಿ ಬರೀದಿಯಾ ಗುಲ್ಲಾರ್ ,ಹಾವೇಲಿ ಮತ್ತು ಬೀದರ್ ಇವು ವಕ್ಫ್ ಮಂಡಲಿಯಲ್ಲಿ ನೊಂದಣಿಯಾಗಿದೆಯೇ?

2.ಹಾಗಿದ್ದಲ್ಲಿ ನೊಂದಣಿಯಾದಗಿನಿಂದ ಸದರಿ ಜಾಗದಲ್ಲಿ ನಮಾಜ್ ಪ್ರಾರ್ಥನೆ ಮಾಡಲಾಗುತ್ತಿದೆಯೆ?

ಶ್ರೀ ಆರ್.ರೋಷನ್‌ಬೇಗ್(ವಕ್ಫ್ ರಾಜ್ಯ ಸಚಿವರು)

1.'ಹೌದು'

2.ಬರೀದಿಯಾ ಮಸೀದಿ ಗುಲ್ಲಾರ್,ಹಾವೇಲಿ ಬೀದರ್ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ದಿನಾಂಕ 30-8-73ರಲ್ಲಿ ನೊಂದಣಿಯಾಗಿದೆ. ಆದರೆ ಕೆಲವು ಸಿಖಿ ಮತಿಯರು ನಮಾಜ್ ಮಾಡಲು ಅಡ್ಡಿ ಪಡಿಸಿರುತ್ತಾರೆ. ಆದ್ದರಿಂದ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ರವರಿಗೆ ಬಂದೂ ಬಸ್ತ್ ಮಾಡಲು ಕೋರಲಾಗಿದೆ.

ಶ್ರೀ ಸೈಯಾದ್ ಜುಲ್ಫಕರ್ ಹಷ್ಮಿ : ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆಯ ಮಜ್‌ಜಿದ್ ಬರ್ದಿಯ ಗೊಲ್ಲೂರ್ ಹವೇಲಿಯು ವಕ್ಫ್ ಮಂಡಳಿಯಲ್ಲಿ ನೋಂದಾವಣಿಯಾಗಿದೆಯೇ ಎಂದು ಕೇಳಿದ್ದಕ್ಕೆ ನೊಂದಾವಣಿಯಾಗಿದೆಯೆಂದು ಹೇಳಿದ್ದಾರೆ. ಅಲ್ಲಿ ನಮಾಜ್ ಮಾಡಲು ಅವಕಾಶ ನೀಡಿ ರಕ್ಷಣೆ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮತ್ತು ಪೋಲೀಸ್ ವರಿಷ್ಟರಿಗೆ ತಿಳಿಸಿರುವುದಾಗಿ ಹೇಳಿದ್ದೀರಿ. ಆದರೆ ಅಲ್ಲಿನ ಪರಿಸ್ಥಿತಿ ತದ್ವಿರುದ್ದವಾಗಿದೆ. 144ನೇ ಸೆಕ್ಷನ್ ಜಾರಿಗೆ ತಂದು ಮುಸ್ಲಿಂ ಜನರಿಗೆ ನಮಾಜ್ ಮಾಡಲು ಅವಕಾಶ ಕೊಡುತ್ತಿಲ್ಲ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಇದರ ಬಗ್ಗೆ ನಾನು ಹೋರಾಟ ಮಾಡುತ್ತಿದ್ದೆ. ಆದರೆ ನಮ್ಮ ಜಿಲ್ಲೆಯ ಉಸ್ತೂವಾರಿ ಸಚಿವರಾದ ಬಸವರಾಜ್‌ಪಾಟೀಲ್ ಅಟ್ಟೂರ್‌ರವರು ಮತ್ತು ಮೀರಾಜುದ್ದೀನ್ ಪಟೀಲರು ತಾವು ಏನೂ ಮಾಡಲು ಹೋಗಬೇಡಿ, ರಂಜಾನ್‌ಹಬ್ಬ ಆದತಕ್ಷಣ ಇದರ ಬಗ್ಗೆಪರಿಹಾರ ಮಾಡೋಣವೆಂದು ಭರವಸೆ ನೀಡಿದ್ದರು. ಆದರೆ ಅವರು ಅದುವರೆಗೆ ಏನೂ ಮಾಡಿಲ್ಲ. ದಯಮಾಡಿ ಇದರ ಬಗ್ಗೆ ಉತ್ತರ ನೀಡಬೇಕು.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್(ವಕ್ಫ್ ರಾಜ್ಯ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೇ, ಯಾವುದೇ ಮಜ್‌ಜಿದ್ ನೋಂದಾವಣಿಯಾಗಿದ್ದರೆ ಅಲ್ಲಿ ಹೋಗಿ ನಮಾಜ್ ಮಾಡುವುದು ಸಂಪ್ರದಾಯವಾಗಿದೆ. ಆದರೆ ಆ ಕೆಲಸಕ್ಕೆ ತೊಂದರೆ ಯಾದಾಗ ನಾವು ಅಲ್ಲಿನ ಜಿಲ್ಲಾಧಿಕಾರಿಯವರಿಗೆ ಮತ್ತು ಪೋಲೀಸ್ ವರಿಷ್ಟರಿಗೆ ನಿರ್ದೇಶನ ಕೊಟ್ಟು ನಮಾಜ್ ಮಾಡಲು ಅವಕಾಶ ಕಲ್ಪಿಸಿಕೊಡಲು ಆದೇಶವನ್ನು ಕಳುಹಿಸಿ ಕೊಡುತ್ತೇವೆ.

ಶ್ರೀ ಸೈಯಾದ್ ಜುಲ್ಫಕರ್ ಹಷ್ಮಿ : ಪೋಲೀಸ್ ವರೀಷ್ಠರು ಮತ್ತು ಜಿಲ್ಲಾಧಿಕಾರಿಗಳು 144ನೇ ಸೆಕ್ಷನ್ ಜಾರಿಗೆ ತಂದು ಯಾರು ನಮಾಜ್ ಮಾಡಲು ಹೋಗಬೇಡಿ ಎಂದು ಹೇಳುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಇದರ ಬಗ್ಗೆ ಸಭೆ ಮಾಡಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ.

ಶ್ರೀ ಮತಿ ಲೀಲಾದೇವಿ ಆರ್. ಪ್ರಸಾದ್ : ಇದರ ಬಗ್ಗೆ ಇನ್ನೊಂದು ಬಾರಿ ಪರಿಶೀಲನೆ ಮಾಡಿ ಅಲ್ಲಿರುವ ಜಿಲಾಧಿಕಾರಿಗಳಿಗೆ ಮತ್ತು ಪೋಲೀಸ್ ವರೀಷ್ಠರಿಗೆ ಆದೇಶವನ್ನು ಕಳುಹಿಸಿಕೊಟ್ಟು ನಮಾಜ ಮಾಡಲು ಅವಕಾಶ ಕಲ್ಪಿಸಲು ತಿಳಿಸುತ್ತೇನೆ .

ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ ಕಾಮಗಾರಿ ಬಗ್ಗೆ

80(720) ಶ್ರೀ ಬಿ. ಶಿವರಾಮು (ಗಂಡನೆ) : ಮಾನ್ಯ ಬಹ್ಯತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಚೇನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ? ಯೋಜನೆಗೆ ಖರ್ಚು ಮಾಡಿರುವ ಹಣವೆಷ್ಟು ?

ಆ) ಯೋಜನೆಯ ತಾಂತ್ರಿಕ ಕಾರ್ಯಸಾಧ್ಯತೆಹಾಗೂ ಹೇಮಾವತಿ ಉಪಕೊಳ್ಳದ ವಾಟರ್ ಪ್ಲಾನಿಂಗ್ ಅನ್ನು ತೀಕ್ಷ್ಣವಾಗಿ ಪರಿಶೀಲಿಸಿ ಆನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ತೀರ್ಮಾನಿಸಲಾಗುವುದು.

ಶ್ರೀ ಕೆ.ಎನ್ ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) ಈ ಯೋಜನೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿರುತ್ತದೆ . ಖರ್ಚು ಮಾಡಿರುವಮೊತ್ತ ರೂ 165.72 ಲಕ್ಷಗಳು.

ಆ) ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರದಲ್ಲಿರುವ ತೊಂದರೆಗಳೇನು?

ಶ್ರೀ ಬಿ.ಶಿವರಾಮ್: ಮಾನ್ಯ ಉಪಾಧ್ಯಕ್ಷರೆ, ಕಾಚೇನಹಳ್ಳಿ ಏತ ನೀರಾವರಿ ಯೋಜನೆಯನ್ನು ಯಾವಾಗ ನಿಲ್ಲಿಸಿದ್ದೀರಿ ಎಂಬುದು ನನ್ನ ಮೊದಲನೆಯ ಪ್ರಶ್ನೆ, ಎರಡನೆಯದಾಗಿ "Critically examining the technical feasibility of the project"ಎಂದು ಹೇಳಿದ್ದಾರೆ. ಅದು ಅರ್ಥವಾಗಬೇಕಾದರೆ ಇಂಗ್ಲೀಷನಲ್ಲಿ ಹೇಳಬೇಕಾಗುತ್ತದೆ.ಹಿಂದೆ ಕೇವಲ 'Examine' ಮಾಡಿದ್ದರು ಎಂದು ಕಾಣುತ್ತದೆ ಈಗ 'critically examine' ಮಾಡುತ್ತಾರೆಂದು ಕಾಣುತ್ತದೆ. ಆನಂತರ "Water planning of Hemavathy Sub-basin"ಎಂದು ಹೇಳಿದ್ದಾರೆ. ತಾವು ಆ ಟೆಕ್ನಿಕಲ್ ಫೀಜಿಲಿಟಿಯ ಬಗ್ಗೆ 'critically examine' ಮಾಡಿ ಯಾವಾಗ ತೀರ್ಮಾನ ಕೊಡುತ್ತೀರಾ? ಮೂರನೆಯದಾಗಿ, ಹೇಮಾವತಿ ಬೇಸಿನ್ ವಾಟರ್ ಅಲೋಕೇಷನ್ ಬಗ್ಗೆ 'critically examine' ಮಾಡದೆಯೇ ಯಾವುದಾದರೂ ಯೋಜನೆಯನ್ನು ಪ್ರಾರಂಭ ಮಾಡಿದ್ದೀರಾ? ಈ ಮೂರು ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗಿ ವಿನಂತಿಸುತ್ತೇನೆ.